# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 722 (841) |
| ವಿಧಾನ ಪರಿಷತ್ ಸದಸ್ಯರ ಹೆಸರು | : | ಶ್ರೀ ಎಸ್.ವ್ಲಿ. ಸಂಕನೂರ (ಪದವೀಧರರ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |
| ಉತ್ತರಿಸುವ ದಿನಾಂಕ | : | 10.03.2026 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಫೆಬ್ರುವರಿ-2025 ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಎಷ್ಟು ದೇಶ ಮತ್ತು ವಿದೇಶಗಳಿಂದ ಉದ್ದಿಮೆದಾರರು ಭಾಗವಹಿಸಿದ್ದರು; ದೇಶ-ವಿದೇಶಗಳ ಉದ್ದಿಮೆದಾರರ ಪ್ರತ್ಯೇಕ ಮಾಹಿತಿ ನೀಡುವುದು; | ಫೆಬ್ರುವರಿ-2025 ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಭಾಗವಹಿಸಿದ ಕಂಪನಿಗಳ ವಿವರಗಳನ್ನು **ಅನುಬಂಧ -1ರಲ್ಲಿ** ಒದಗಿಸಿದೆ. |
| ಆ | ಭಾಗವಹಿಸಿದ ಉದ್ದಿಮೆದಾರರಲ್ಲಿ ಎಷ್ಟು ಉದ್ದಿಮೆದಾರರು ಉದ್ಯಮ ಪ್ರಾರಂಭಿಸಲು ಒಡಂಬಡಿಕೆ ಮಾಡಿಕೊಂಡಿದ್ದಾರೆ; | ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ-2025 ರಲ್ಲಿ ಸರ್ಕಾರವು 98 ಕಂಪನಿಗಳೊಂದಿಗೆ ಒಟ್ಟು ರೂ.6,23,970/- ಕೋಟಿ ಬಂಡವಾಳ ಹೂಡಲು ಒಡಂಬಡಿಕೆಗಳಿಗೆ ಸಹಿ ಮಾಡಲಾಗಿದೆ.<br><br>ವಿವರಗಳನ್ನು **ಅನುಬಂಧ-2ರಲ್ಲಿ** ಒದಗಿಸಿದೆ. |
| ಇ | ಉದ್ದಿಮೆದಾರರು ಯಾವ ಯಾವ ಸ್ಥಳ ಹಾಗೂ ಕ್ಷೇತ್ರಗಳಲ್ಲಿ ಎಷ್ಟು ಪ್ರಮಾಣದ ಬಂಡವಾಳ ಹೂಡಿಕೆಗೆ ಸರ್ಕಾರದ ಜೊತೆ ಒಡಂಬಡಿಕೆ ಮಾಡಿಕೊಂಡಿದ್ದಾರೆ? | |
| ಈ | ಹೊಸದಾಗಿ ಪ್ರಾರಂಭವಾಗಲಿರುವ ಉದ್ದಿಮೆಗಳು ಎಷ್ಟು ಅವಧಿಯಲ್ಲಿ ತಮ್ಮ ತಮ್ಮ ಘಟಕಗಳನ್ನು ಪ್ರಾರಂಭಿಸುವ ಬಗ್ಗೆ ಭರವಸೆ ನೀಡಿದ್ದಾರೆ; ಮತ್ತು ಈ ಉದ್ದಿಮೆದಾರರಿಗೆ ಯಾವ ಯಾವ ರೀತಿಯಲ್ಲಿ ಪ್ರೋತ್ಸಾಹದಾಯಕ ಅನುಕೂಲತೆಗಳನ್ನು ಮಾಡಿಕೊಡುವ ಬಗ್ಗೆ ಸರ್ಕಾರ ಭರವಸೆ ನೀಡಿದೆ; (ವಿವರ ನೀಡುವುದು) | ಬಂಡವಾಳ ಹೂಡುವ ಕಂಪನಿಗಳಿಗೆ ಸಂಬಂಧಿಸಿದ ಕೈಗಾರಿಕಾ ನೀತಿ 2025-30, Aerospace & Defence Policy 2022-27, Karnataka Clean Mobility Policy 2025-30 ರನ್ವಯ ಸೌಲಭ್ಯಗಳನ್ನು ನೀಡಲಾಗುತ್ತದೆ.<br><br>ಅಲ್ಲದೆ, ರಾಜ್ಯದಲ್ಲಿ ಸುಲಲಿತ ವ್ಯವಹಾರಕ್ಕೆ (EoDB) ಒತ್ತು ನೀಡಲು ಹಾಗೂ ರಾಜ್ಯದಲ್ಲಿ ಇನ್ನೂ ಹೆಚ್ಚಿನ ಕೈಗಾರಿಕಾ ಸ್ನೇಹಿ ವಾತಾವರಣ ಸೃಷ್ಟಿಸಲು ಏಕಗವಾಕ್ಷಿ ಪೋರ್ಟಲ್ (Single Window Portal-SWP) ಅಭಿವೃದ್ಧಿಪಡಿಸಲಾಗಿದೆ ಹಾಗೂ ವ್ಯವಸ್ಥೆಯು ರಾಜ್ಯದಲ್ಲಿ ಹೂಡಿಕೆಗಳನ್ನು ಸುಗಮಗೊಳಿಸಲು ಮತ್ತು ತ್ವರಿತಗೊಳಿಸಲು ವ್ಯವಸ್ಥಿತ ಮತ್ತು Digital-First Approach ಒದಗಿಸಿದೆ ಮತ್ತು ಎಲ್ಲಾ ಕೈಗಾರಿಕೆ ಚಟುವಟಿಕೆ ಸಂಬಂಧಿತ ಬಂಡವಾಳ ಹೂಡಿಕೆ ಯೋಜನೆಗಳಿಗೆ ಒಂದೇ ಕಡೆ ಎಲ್ಲಾ ಅನುಮೋದನೆಗಳು /ಮಂಜೂರಾತಿ/ ನಿರಾಕ್ಷೇಪಣೆಗಳನ್ನು ಪಡೆಯಲು ಅನುಕೂಲ ಕಲ್ಪಿಸಲಾಗಿದೆ.<br><br>ಇವುಗಳೆಲ್ಲ, ಬೃಹತ್ ಕೈಗಾರಿಕೆಗಳಾಗಿರುವುದರಿಂದ, ಸಂಬಂಧಿಸಿದ SHLCC/SLSWCC ಸಮಿತಿಗಳಿಂದ ಅನುಮೋದನೆ ಪಡೆದ ನಂತರ, ಯೋಜನೆ ಅನುಷ್ಠಾನಕ್ಕೆ ಕನಿಷ್ಠ 3-5 ವರ್ಷಗಳು ಬೇಕಾಗುತ್ತದೆ. |

| | | |
|---|---|---|
| ಉ | ಹೊಸದಾಗಿ ಪ್ರಾರಂಭವಾಗಲಿರುವ ವಿವಿಧ ರೀತಿಯ ಉದ್ದಿಮೆಗಳಿಂದ ನಮ್ಮ ಭಾಗದ ಯುವ ಪದವೀಧರರರಿಗೆ ಎಷ್ಟು ಉದ್ಯೋಗಾವಕಾಶ ಲಭ್ಯವಾಗಿರುವುದು; (ಮಾಹಿತಿ ನೀಡುವುದು) | ಒಡಂಬಡಿಕೆಗಳಿಗೆ ಸಹಿ ಮಾಡಲಾದ ಕಂಪನಿಗಳಿಂದ ಕರ್ನಾಟಕದಲ್ಲಿ ಸುಮಾರು 2,20,051 ಜನರಿಗೆ ಉದ್ಯೋಗ ನಿರೀಕ್ಷಿಸಲಾಗಿದೆ. |
| ಊ | ಫೆಬ್ರುವರಿ-2025 ಜಾಗತಿಕ ಹೂಡಿಕೆದಾರರ ಸಮಾವೇಶ ಎಷ್ಟು ದಿನಗಳವರೆಗೆ ಜರುಗಿದೆ ಮತ್ತು ಅದಕ್ಕೆ ಖರ್ಚು ಆದ ಹಣ ಎಷ್ಟು; (ಮಾಹಿತಿ ನೀಡುವುದು) | ದಿನಾಂಕ 11-14ನೇ ಫೆಬ್ರುವರಿ 2025 ರ ಅವಧಿಯಲ್ಲಿ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಆಯೋಜಿಸಿದ್ದು, ಈ ಸಮಾವೇಶಕ್ಕಾಗಿ ಒಟ್ಟು ರೂ. 100.69 ಕೋಟಿ ವೆಚ್ಚವಾಗಿರುತ್ತದೆ. |
| ಋ | ಫೆಬ್ರುವರಿ-2025 ಜಾಗತಿಕ ಹೂಡಿಕೆದಾರರ ಸಮಾವೇಶ ಪೂರ್ವ ಈ ಹಿಂದೆ ಯಾವಾಗ ಹಾಗೂ ಯಾವ ಸ್ಥಳದಲ್ಲಿ ಜಾಗತಿಕ ಹೂಡಿಕೆದಾರರ ಸಮಾವೇಶ ನಡೆದಿತ್ತು; ಹಿಂದಿನ ಹೂಡಿಕೆದಾರರು ಸಮಾವೇಶದಲ್ಲಿ ಎಷ್ಟು ಉದ್ದಿಮೆದಾರರು ಉದ್ಯಮ ಪ್ರಾರಂಭಿಸಲು ಒಡಂಬಡಿಕೆ ಮಾಡಿಕೊಂಡಿದ್ದರು; ಆ ಪೈಕಿ ಇಂದಿನವರೆಗೆ ಎಷ್ಟು ಉದ್ದಿಮೆಗಳು ಪ್ರಾರಂಭವಾಗಿವೆ? (ಸಂಪೂರ್ಣ ವಿವರ ನೀಡುವುದು) | ಈ ಹಿಂದೆ ಬೆಂಗಳೂರಿನಲ್ಲಿ ದಿನಾಂಕ: 2-4ನೇ ನವೆಂಬರ್ 2022ರಂದು ಆಯೋಜಿಸಲಾಗಿದ್ದ 'ಇನ್ವೆಸ್ಟ್ ಕರ್ನಾಟಕ-2022' ರ ಸಮಾವೇಶದಲ್ಲಿ ಉದ್ಯಮ ಪ್ರಾರಂಭಿಸಲು 57 ಕಂಪನಿಗಳೊಂದಿಗೆ ಒಟ್ಟು ರೂ. 5,41,369/- ಕೋಟಿ ಬಂಡವಾಳ ಹೂಡಲು ಒಪ್ಪಂದಗಳಿಗೆ ಸಹಿಮಾಡಲಾಗಿದೆ.<br><br>ಈ ಪೈಕಿ 20 ಯೋಜನೆಗಳಿಗೆ SHLCC / SLSWCC ಸಭೆಗಳಲ್ಲಿ ಅನುಮೋದನೆ ನೀಡಲಾಗಿದೆ. ಇವುಗಳಿಂದ ರೂ. 2,01,167/- ಕೋಟಿ ಬಂಡವಾಳ ಹೂಡಿಕೆ ಸೃಜನೆಯಾಗಲಿದೆ. ಇವುಗಳಲ್ಲಿ 2 ಅನುಷ್ಠಾನ ಗೊಂಡಿದ್ದು, ರೂ. 4,093/- ಕೋಟಿ ಬಂಡವಾಳ ಹೂಡಿಕೆಯಾಗಿದೆ ಮತ್ತು 1,415 ಉದ್ಯೋಗ ಸೃಜನೆಯಾಗಿದೆ. ಬಾಕಿ ಯೋಜನೆಗಳು ಅನುಷ್ಠಾನದ ಹಂತದಲ್ಲಿರುತ್ತವೆ ಯಾಗಲಿದೆ ಹಾಗೂ 70,740 ಉದ್ಯೋಗ.<br><br>ಇವುಗಳೆಲ್ಲಾ ಬೃಹತ್ ಯೋಜನೆಗಳಾಗಿರುವುದರಿಂದ ಅನುಷ್ಠಾನಕ್ಕೆ ಕನಿಷ್ಟ 3 ರಿಂದ 5 ವರ್ಷಗಳು ಬೇಕಾಗುತ್ತದೆ. |

ಸಿಐ 43 ಎಸ್‌ಪಿಐ 2026

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು